**ಓ.ಎಸ್. ನಂಃ 528/2017**

**ಪಿ.ಡಬ್ಲ್ಯೂಃ 1**

**ದಿನಾಂಕ 13.08.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ.ಹೆಚ್.ಕೆ.ಹೆಚ್. ವಕೀಲರಿಂದಃ**

1. ನಾನು ಬಿ.ಎ. ಪದವೀದರನಾಗಿರುತ್ತೇನೆ. ನನಗೆ ದಾವಾ 'ಡಿ' ಅನುಸೂಚಿ ಆಸ್ತಿಯ ಚೆಕ್ಕುಬಂಧಿ ಗೊತ್ತಿಲ್ಲ. ದಾವಾ 'ಸಿ' ಅನುಸೂಚಿ ಆಸ್ತಿಯ ಚೆಕ್ಕುಬಂಧಿ ಪೂರ್ವಕ್ಕೆ-ರಾಜಶೆಟ್ಟರವರ ಗದ್ದೆ, ಪಶ್ಚಿಮಕ್ಕೆ-ಬೋರಮ್ಮರವರ ಆಸ್ತಿ, ಉತ್ತರಕ್ಕೆ ಮತ್ತು ದಕ್ಷಿಣಕ್ಕೆ 6 ನೇ ಪ್ರತಿವಾದಿಯಾದ ವಿಜಯೇಂದ್ರರವರ ಆಸ್ತಿ ಇದೆ. ದಾವಾ 'ಬಿ' ಅನುಸೂಚಿ ಆಸ್ತಿಯ ಚೆಕ್ಕುಬಂಧಿ ಪೂರ್ವಕ್ಕೆ-ರಾಜಶೆಟ್ಟರವರ ಜಮೀನು, ಪಶ್ಚಿಮಕ್ಕೆ-ಗೋವಿಂದರವರ ಜಮೀನು, ಉತ್ತರಕ್ಕೆ-ಬೋರಮ್ಮರವರ ಜಮೀನು ಹಾಗೂ ದಕ್ಷಿಣಕ್ಕೆ 6 ನೇ ಪ್ರತಿವಾದಿಯಾದ ವಿಜಯೇಂದ್ರರವರ ಜಮೀನು ಇದೆ.

2. ನಿಪಿ.9 ರ ವಂಶವೃಕ್ಷ ತಯಾರಿಸಲು ನಾನೇ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನಾನು ನಿಪಿ.9 ರ ವಂಶವೃಕ್ಷವನ್ನು ಸೃಷ್ಟಿಸಿಕೊಂಡು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ.9 ರ ವಂಶವೃಕ್ಷವನ್ನು ನೀಡುವಂತೆ ಕೋರಿ ಸಲ್ಲಿಸಿದ ಅರ್ಜಿಯ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಾವು ದಾವಾ 'ಬಿ' ಅನುಸೂಚಿ ಆಸ್ತಿಯನ್ನು ನಮ್ಮ ಹೆಸರಿಗೆ ಖಾತೆ ವರ್ಗಾವಣೆ ಕೋರಿ ತಾಲ್ಲೂಕು ಕಚೇರಿಗೆ ಅರ್ಜಿಯನ್ನು ಸಲ್ಲಿಸಿದಾಗ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಿ ಎಂದು ಹೇಳಿದ ಕಾರಣ ನಾವು ಈ ದಾವೆಯನ್ನು ಹೂಡಿರುತ್ತೇವೆ.

3. ನಾವು ನೀಡಿದ ಅರ್ಜಿಗೆ ಉಪವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಿ ಎಂದು ಹಿಂಬರಹವನ್ನು ನೀಡಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಉಪವಿಭಾಗಾಧಿಕಾರಿಯವರ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿಸಲು ನಿಮಗೇನಾದರೂ ತೊಂದರೆ ಇತ್ತಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು

ನ್ಯಾಯಾಲಯದಲ್ಲಿ ಪರಿಹಾರ ಕಂಡುಕೊಳ್ಳಿ ಎಂದು ತಾಲ್ಲೂಕು ಕಚೇರಿಯವರು ಹೇಳಿದ ಕಾರಣ ನಾವು ಈ ದಾವೆಯನ್ನು ಹೂಡಿರುತ್ತೇವೆ ಎಂದು ಸಾಕ್ಷಿಯು ಉತ್ತರಿಸಿರುತ್ತಾರೆ.

4. ಯಾವ ಆಧಾರದ ಮೇಲೆ ನೀವು ದಾವಾ 'ಬಿ' ಅನುಸೂಚಿ ಆಸ್ತಿಯನ್ನು ನಿಮ್ಮ ಹೆಸರಿಗೆ ಖಾತೆ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತೀರಿ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಹಿಂದಿನಿಂದಲೂ ನಾವು ದಾವಾ 'ಬಿ' ಅನುಸೂಚಿ ಆಸ್ತಿಯ ಸ್ವಾಧೀನದಲ್ಲಿರುವ ಆಧಾರದ ಮೇರೆಗೆ ಅದನ್ನು ನಮ್ಮ ಹೆಸರಿಗೆ ಖಾತೆ ವರ್ಗಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತೇವೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ದಾವಾ 'ಬಿ' ಅನುಸೂಚಿ ಆಸ್ತಿಯ ಖಾತೆಯು 6 ನೇ ಪ್ರತಿವಾದಿಯ ಹೆಸರಿಗೆ ಬದಲಾವಣೆ ಆಗಿದ್ದು ಅದನ್ನು ನಮ್ಮ ಹೆಸರಿಗೆ ಖಾತೆ ವರ್ಗಾವಣೆ ಮಾಡಿ ಕೊಡುವಂತೆ ಕೋರಿ ನಾವು ಈ ದಾವೆಯನ್ನು ಹೂಡಿರುತ್ತೇವೆ. ದಾವಾ 'ಬಿ' ಅನುಸೂಚಿ ಆಸ್ತಿಯ ಖಾತೆ ನಮ್ಮ ಹೆಸರಿಗೆ ವರ್ಗಾವಣೆ ಮಾಡಿಕೊಡಬೇಕು ಎನ್ನುವ ಪರಿಹಾರವನ್ನು ಹೊರತುಪಡಿಸಿ ನಾವು ಈ ದಾವೆಯಲ್ಲಿ ಬೇರೆ ಯಾವುದೇ ಪರಿಹಾರವನ್ನು ಕೇಳಿರುವುದಿಲ್ಲ ಎಂದರೆ ಸರಿ.

5. ದಾವಾ 'ಬಿ' ಅನುಸೂಚಿ ಆಸ್ತಿಯನ್ನು 6 ನೇ ಪ್ರತಿವಾದಿಯ ತಂದೆಯಾದ ಸಿದ್ದೇಗೌಡ ಬಿನ್ ಕೆಂಪೇಗೌಡರು ಪರಶುರಾಮೇಗೌಡ ಎನ್ನುವವರಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ದಾವಾ 'ಎ ಇಂದ ಸಿ' ಅನುಸೂಚಿ ಆಸ್ತಿಗಳ ದಾಖಲೆಗಳನ್ನು ನಾನು ನೋಡಿರುತ್ತೇನೆ. ದಾವಾ 'ಬಿ' ಅನುಸೂಚಿ ಆಸ್ತಿಯ ಹಳೆಯ ಸರ್ವೇ ನಂಬರ 512 ಅಂತ ಇದ್ದು, ಅದನ್ನು ಹೊಸದಾಗಿ ಸರ್ವೇ ನಂಬರ್ 509 ಎಂದು ಮಾಡಿರುತ್ತಾರೆ ಎಂದರೆ ಸರಿಯಲ್ಲ.

6. ದಾವಾ 'ಸಿ' ಅನುಸೂಚಿ ಆಸ್ತಿಯನ್ನು ಭೂ ನ್ಯಾಯ ಮಂಡಳಿಯವರು 6 ನೇ ಪ್ರತಿವಾದಿಯ ತಂದೆಯಾದ ಸಿದ್ದೇಗೌಡ ಬಿನ್ ಕೆಂಪೇಗೌಡರಿಗೆ ಮಂಜೂರು ಮಾಡಿರುತ್ತಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ. ನಿಪಿ.11 ರ ದಾಖಲೆಯು ದಾವಾ 'ಬಿ' ಅನುಸೂಚಿ ಆಸ್ತಿಗೆ ಸಂಬಂದಪಟ್ಟ ದಾಖಲೆಯಾಗಿರುತ್ತದೆ. 6 ನೇ ಪ್ರತಿವಾದಿಯ ಮರಣದ ನಂತರ ಅವರ ವಾರಸುದಾರರೇ ದಾವಾ 'ಬಿ' ಅನುಸೂಚಿ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದರೆ

ಸರಿಯಲ್ಲ. ದಿನಾಂಕ 02.02.1973 ರ ಕ್ರಯಪತ್ರದಡಿಯಲ್ಲಿ ಖರೀದಿಸಿರುವ ದಾವಾ 'ಬಿ' ಅನುಸೂಚಿ ಆಸ್ತಿಯ ಚೆಕ್ಕುಬಂಧಿ ನನಗೆ ಹೇಳಲಾಗುವುದಿಲ್ಲ.

**ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**